## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಕಛೇರಿಗೆ ಹೆಚ್ಚುವರಿ ಆಪ್ತ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸುವ ಕುರಿತು

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 125 ಸಿಆಸೇ 2002 ದಿನಾಂಕ 27.11.2002
2. ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 33 ಆಪಿಸೇ 2007 ದಿನಾಂಕ 25.01.2007
3. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ ಎಫ್‌ಡಿ 914 ವೆಚ್ಚ –7–08 ದಿನಾಂಕ 07.08.2008

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಆಪ್ತಶಾಖೆಗೆ ಕೆಳಕಂಡಂತೆ 12 ವಿವಿಧ ದರ್ಜೆಯ ಹುದ್ದೆಗಳನ್ನು ನಿಯೋಜನೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

| | | |
|---|---|---|
| 1) ಆಪ್ತ ಕಾರ್ಯದರ್ಶಿಗಳು | : | 1 ಹುದ್ದೆ |
| 2) ಆಪ್ತ ಸಹಾಯಕರು | : | 4 ಹುದ್ದೆಗಳು |
| 3) ಕನ್ನಡ ಶೀಘ್ರಲಿಪಿಗಾರರು | : | 1 ಹುದ್ದೆ |
| 4) ವಾಹನ ಚಾಲಕರು | : | 2 ಹುದ್ದೆಗಳು |
| 5) ಗ್ರೂಪ್ 'ಡಿ' | : | 4 ಹುದ್ದೆಗಳು |
| ಒಟ್ಟು | | 12 ಹುದ್ದೆಗಳು |

ಮೇಲೆ ಓದಲಾದ ಕ್ರಮಸಂಖ್ಯೆ (2) ರ ಅಧಿಕೃತ ಜ್ಞಾಪನದಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಸಚಿವಾಲಯ/ಉಪಮುಖ್ಯಮಂತ್ರಿಯವರ ಸಚಿವಾಲಯ ಹಾಗೂ ಸಚಿವರ ಮತ್ತು ರಾಜ್ಯ ಸಚಿವರ ಆಪ್ತ ಶಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ನೌಕರರ ವೇತನವನ್ನು ದಿನಾಂಕ 01.01.2007 ರಿಂದ ಪರಿಷ್ಕರಿಸಲಾಗಿದೆ.

ಪ್ರಸ್ತುತ ರಾಜ್ಯ ಯೋಜನಾ ಮಂಡಳಿಯಿಂದ ರಾಜ್ಯದ ಹನ್ನೊಂದನೆ ಪಂಚವಾರ್ಷಿಕ ಯೋಜನೆ, ಕರ್ನಾಟಕ ದೂರದೃಷ್ಟಿ ನಕ್ಷೆ ತಯಾರಿಕೆ ಹಾಗೂ ರಾಜ್ಯದ ಯೋಜನೆಗಳ ಪರಿಶೀಲನೆ, ಮಂಡಳಿಯ ಮತ್ತಿತರ ಬಲವರ್ಧನೆ ಕಾರ್ಯಗಳನ್ನು ಕೈಗೊಂಡಿದ್ದು, ಮಂಡಳಿಯ ಕಾರ್ಯಭಾರವು ಅಧಿಕವಾಗಿರುತ್ತದೆ.

ಆದಕಾರಣ, ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ ಇವರಿಗೆ ಈಗಾಗಲೇ ಮಂಜೂರಾಗಿರುವ ಒಟ್ಟು 12 ಹುದ್ದೆಗಳೊಂದಿಗೆ ವಾಹನ ಚಾಲಕರ 1 ಹುದ್ದೆ ಮತ್ತು ಗ್ರೂಪ್–ಡಿ–2 ಹುದ್ದೆಗಳನ್ನು ಹಾಗೂ ಇವರಿಗೆ ಆಧಾರವಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಶೋಧನಾ ಸಮಾಲೋಚಕರು ಮತ್ತು ಜಂಟಿ ಕಾರ್ಯದರ್ಶಿಗಳ ಕಛೇರಿಗೆ ಆಪ್ತ ಸಹಾಯಕರು – 1 ಹುದ್ದೆ, ವಾಹನ ಚಾಲಕರು – 1 ಹುದ್ದೆ, ಮತ್ತು ಗ್ರೂಪ್ –ಡಿ 1 ಹುದ್ದೆ ಒಟ್ಟು 5 ಹುದ್ದೆಗಳನ್ನು ಸೃಜಿಸುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಮೇಲ್ಕಂಡ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಉಲ್ಲೇಖ(3) ರಲ್ಲಿನ ಹಿಂಬರಹದಲ್ಲಿ ಸಹಮತಿ ನೀಡಿರುವುದರಿಂದ ಕೆಳಕಂಡಂತೆ ಆದೇಶ

**ಸರ್ಕಾರದ ಆದೇಶ ಸಂಖ್ಯೆ ಪಿಡಿ 50 ಎಸ್‌ಪಿಬಿ 2008**

**ಬೆಂಗಳೂರು, ದಿನಾಂಕ 19.08.2008**

I. ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯ ಯೋಜನಾ ಮಂಡಳಿಗೆ ಈ ಕೆಳಕಂಡಂತೆ 6 ವಿವಿಧ ದರ್ಜೆಯ ಹುದ್ದೆಗಳನ್ನು ದಿನಾಂಕ 07.08.2008 ರಿಂದ ಜಾರಿಗೆ ಬರುವಂತೆ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 33 ಆಪಿಸೇ 2007

ದಿನಾಂಕ 25.01.2007 ರ ಸಂಚಿಕೆ ಸಂಬಳದ ಪರಿಷ್ಕರಣೆಯೊಂದಿಗೆ ತಾತ್ಕಾಲಿಕವಾಗಿ ಐದು ವರ್ಷಗಳ ಅವಧಿಯವರೆಗೆ ನಿಯೋಜನೆ ಮೇಲೆ ಅಥವಾ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ

i) ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಆಪ್ತಶಾಖೆಗೆ :

1. ವಾಹನ ಚಾಲಕರು : 1 ಹುದ್ದೆ
2. ಗ್ರೂಪ್ ಡಿ : 2 ಹುದ್ದೆಗಳು

ii) ಸಂಶೋಧನಾ ಸಮಾಲೋಚಕರು ಮತ್ತು ಜಂಟಿ ಕಾರ್ಯದರ್ಶಿಗಳ ಆಪ್ತಶಾಖೆ

1. ಆಪ್ತ ಸಹಾಯಕರು : 1 ಹುದ್ದೆ
2. ವಾಹನ ಚಾಲಕರು : 1 ಹುದ್ದೆ
3. ಗ್ರೂಪ್ ಡಿ : 1 ಹುದ್ದೆ

2. ಈ ಹುದ್ದೆಗಳಿಗೆ ತಗಲುವ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ-ಆಯವ್ಯಯ-ಲೆಕ್ಕ-ಶೀರ್ಷಿಕೆ 3451-00-101-4-60 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ ಎಫ್‌ಡಿ 914 ವೆಚ್ಚ -7-08 ದಿನಾಂಕ 07.08.2008 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ-3
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.(ಎ ಮತ್ತು ಇ)(1 ಮತ್ತು 2)
2. ಶ್ರೀ ಡಿ.ಹೆಚ್.ಶಂಕರಮೂರ್ತಿ, ಮಾನ್ಯ ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ, ವಿಕಾಸಸೌಧ
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಪದನಿಮಿತ್ತ ಸದಸ್ಯ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ, ಬಹುಮಹಡಿ ಕಟ್ಟಡ, ಬೆಂಗಳೂರು
5. ಜಂಟಿ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ 7/8)
7. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ರಾಜ್ಯ ಶಿಷ್ಟಾಚಾರ)
8. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
9. ಲೆಕ್ಕಾಧಿಕಾರಿಗಳು, ರಾಜ್ಯ ಯೋಜನಾ ಮಂಡಳಿ
10. ರಕ್ಷಾ ಕಡತ ಹಾಗೂ ಹೆಚ್ಚುವರಿ ಪ್ರತಿಗಳು